ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

*ಸಂ:* **DTE-ADMI0EST(10)/43/2021-JD-DEPT TEC** | 471

*ಆಯುಕ್ತರಕಛೇರಿ,*
*ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ*
*ಅರಮನೆರಸ್ತೆ, ಬೆಂಗಳೂರು-01.ದಿನಾಂಕ: 18.07.2022*

**ಹಿಂಬರಹ**

*ವಿಷಯ:* ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ Form of Option ನೀಡುವುದರ ಬಗ್ಗೆ

ಉಲ್ಲೇಖ: ಹಲವಾರು ಸಚಿವರು/ಶಾಸಕರು/ಆಪ್ತ ಕಾರ್ಯದರ್ಶಿಗಳು/ ಸರ್ಕಾರಿ ಪಾಲಿಟೆಕ್ನಿಕ್ ಸಂಘದವರು ಇವರ ಪತ್ರಗಳು

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ಉಲ್ಲೇಖಿತ ಪತ್ರಗಳಲ್ಲಿ ಎ.ಪಿ.ಐ(API/PBAS) ಸ್ಕೋರ್ ಆಧಾರಿತ ವೃತಿ ಪದೋನ್ನತಿಯನ್ನು (ಸಿ.ಎ.ಎಸ್) Retrospective ಗೆ ಬದಲು Prospective ಆಗಿ ಜಾರಿಗೊಳಿಸುವಂತೆ ಹಲವಾರು ಸಚಿವರು/ಶಾಸಕರು/ಆಪ್ತ ಕಾರ್ಯದರ್ಶಿಗಳು/ ಸರ್ಕಾರಿ ಪಾಲಿಟೆಕ್ನಿಕ್ ಸಂಘದವರು. ಮಂಜೂರು ಮಾಡುವಂತೆ ಶಿಫಾರಸ್ಸು ಪತ್ರಗಳನ್ನು ನೀಡಿರುತ್ತಾರೆ ಎಐಸಿಟಿಇ ಅಧಿಸೂಚನೆ ಪತ್ರ ಸಂ: FN:61-1/RIFD/7TH CPC /2016-17 DT:01.03.2019ರಲ್ಲಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 7ನೇ ವೇತನ ಶ್ರೇಣಿಯನ್ನು ದಿನಾಂಕ: 01.03.2019 ರಿಂದ ಜಾರಿಗೊಳಿಸಲಾಗಿದೆ. ಸದರಿ ಅಧಿಸೂಚನೆಯನ್ನು ದಿನಾಂಕ:01.04.2018 ರಿಂದ ಕಾಲ್ಪನಿಕವಾಗಿ 01.04.2020ರಿಂದ ಆರ್ಥಿಕ ಸೌಲಭ್ಯದೊಂದಿಗೆ ರಾಜ್ಯ ಸರ್ಕಾರ ಅಳವಡಿಸಿಕೊಂಡು ಆದೇಶಿಸಲಾಗಿರುತ್ತದೆ. ಸದರಿ ಆದೇಶದಲ್ಲಿ Form of Option ನೀಡುವ ಬಗ್ಗೆ ಯಾವುದೇ ಅವಕಾಶವನ್ನು ಕಲ್ಪಿಸಲಾಗಿರುವುದಿಲ್ಲ .ಮುಂದುವರೆದು, ಸ್ಪಷ್ಟೀಕರಣದ ಅಧಿಸೂಚನೆ ಪತ್ರ ಸಂ:FN:61-1/RIFD/7TH CPC /2016-17 DT:20.05.2020 ರ ಕಂಡಿಕೆ 09 ರಲ್ಲಿಈ ಕೆಳಕಂಡಂತೆ Form of Option ಕುರಿತು ಸ್ಪಷ್ಟೀಕರಣ ನೀಡಲಾಗಿದೆ.

| | | |
|---|---|---|
| 9 | The Clauses 1.4 (c) and 1.4 (d) of AICTE Notification dated 1st march 2019 are contradictory to each other and there is confusion about the crucial date of eligibility for CAS promotion under 6th CPC | The clause 1.4 (d) of AICTE notification should be deleted |

ಸದರಿ ಸ್ಪಷ್ಟೀಕರಣದ ಅಧಿಸೂಚನೆಯನ್ವಯ ಎಐಸಿಟಿಇ 7ನೇ ವೇತನ ಶ್ರೇಣಿ (ಅಧಿಸೂಚನೆ ಪತ್ರ ಸಂ: FN:61-1/RIFD/7TH CPC /2016-17 DT:01.03.2019) ಕಂಡಿಕೆ 1.4 (d) ಪ್ಯಾರವನ್ನು ರದ್ದುಪಡಿಸಲಾಗಿರುತ್ತದೆ. **ಈ ಹಿನ್ನಲೆಯಲ್ಲಿ ಎ.ಐ.ಸಿ.ಟಿ.ಇ 7ನೇ ವೇತನ ಶ್ರೇಣಿ ಅಧಿಸೂಚನೆ ಜಾರಿಗೊಳಿಸಲಾದ ದಿನಾಂಕ: 01.03.2019ರ ನಂತರ 6 ನೇ ವೇತನ ಶ್ರೇಣಿಯ ನಿಯಮಗಳನ್ವಯ Form of Option ನೀಡುವುದರ ಬಗ್ಗೆ ಎಐಸಿಟಿಇ ರವರಿಗೆ ಸ್ಪಷ್ಟೀಕರಣ ಕೋರಿ ಪತ್ರ ವ್ಯವಹರಿಸಲಾಗಿದೆ. ಸ್ಪಷ್ಟೀಕರಣ ಬಂದ ನಂತರ ಕ್ರಮಕೈಗೊಳ್ಳಲಾಗುವುದೆಂಬ ಅಂಶವನ್ನು ತಮ್ಮ ಗಮನಕ್ಕ ತರಲಾಗಿದೆ.**

21/07/2022

ನಿರ್ದೇಶಕರು.
ತಾಂತ್ರಿಕ ಶಿಕ್ಷಣ ಇಲಾಖೆ,

ಗೆ:ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರುಗಳ ಮಾಹಿತಿಗಾಗಿ **(ಇ-ಆಡಳಿತದ ಮುಖಾಂತರ)**